## ತಾಳೀಕೋಟೆ ಬಾದಾಮಿ ಮುಂತಾದ ಐತಿಹಾಸಿಕ ಮತ್ತು ಯಾತ್ರಸ್ಥಳಗಳ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ತಯಾರಿಸುವ ಬಗ್ಗೆ

೪೯ (ಅ) ಶ್ರೀಮತಿ ಮುಖ್ತಾರುನ್ನೀಸಾ (ನರಸಿಂಹರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಇಂದಿನ ಮತ್ತು ಮುಂದಿನ ಜನಾಂಗಕ್ಕೆ ತಿಳುವಳಿಕೆ ನೀಡುವ ಉದ್ದೇಶದಿಂದ ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ತಾಳೀಕೋಟೆ, ಬಾದಾಮಿ ಮುಂತಾದ ಐತಿಹಾಸಿಕ ಮತ್ತು ಯಾತ್ರಸ್ಥಳಗಳ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ತಯಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಆ) ಹಾಗಿದ್ದಲ್ಲಿ, ಅದು ಯಾವಾಗ ಕಾರ್ಯಗತವಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಸದ್ಯಕ್ಕೆ ಅಂತಹ ಯೋಜನೆಯಿಲ್ಲ.

ಆ) ಉದ್ಭವಿಸುವುದಿಲ್ಲ.

## ಕೆ.ಜಿ.ಎಫ್ ನಲ್ಲಿ ನಗರ ಸಾರಿಗೆ ಸೌಲಭ್ಯದ ಬಗ್ಗೆ

೫೦ (೨೬೧) ಶ್ರೀ ಟಿ. ಎಸ್. ಮಣಿ (ಕೆ ಜಿ. ಎಫ್).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೆ.ಜಿ.ಎಫ್ ನಲ್ಲಿ ಇದುವರೆವಿಗೂ ನಗರಸಾರಿಗೆ ಸೌಲಭ್ಯವನ್ನು ಒದಗಿಸದೇ ಇರಲು ಕಾರಣವೇನು ?

ಆ) ಕೆ.ಜಿ.ಎಫ್. ನಿಂದ ಬೇರೆ ಕೇಂದ್ರಗಳಿಗೆ ಎಷ್ಟು ಬಸ್‌ಗಳನ್ನು ಓಡಿಸಲಾಗುತ್ತಿದೆ. ವಾಹನ ಬಲವನ್ನು ಹೆಚ್ಚಿಸಿ ಬೇಡಿಕೆಯನ್ನು ಪೂರೈಸಲು ಸರ್ಕಾರ ಇಚ್ಛಿಸಿದೆಯೇ?

ಇ) ಕೆ.ಜಿ.ಎಫ್. ನಗರದ ಬೆಳವಣಿಗೆ ಮತ್ತು ಜನಸಂದಣಿ ಹೆಚ್ಚುತ್ತಿದ್ದು ವಾಹನ ಸೌಕರ್ಯ ಹೆಚ್ಚಿಗೆ ಬೇಕಾಗಿದೆ. ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಸಾರ್ವಜನಿಕರ ಬೇಡಿಕೆಗಳನ್ನು ಪೂರೈಸಲು ಸರ್ಕಾರವು ಇಚ್ಛಿಸಿದೆಯೇ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—

ಅ) ದಿನಾಂಕ ೨೯.೯.೧೯೭೮ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೆ.ಜಿ.ಎಫ್ ನಗರದಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಒದಗಿಸಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೪ ಬಸ್‌ಗಳನ್ನು ಕೆ.ಜಿ.ಎಫ್ ನಗರದಲ್ಲಿ ಓಡಿಸುತ್ತಿದ್ದು ನಗರದಲ್ಲಿ ವಾಹನ ಬಲವನ್ನು ಹೆಚ್ಚಿಸುವ ಯೋಚನೆ ಇಲ್ಲ.

ಇ) ಈಗಾಗಲೇ ೪ ಬಸ್‌ಗಳನ್ನು ಕೆ.ಜಿ.ಎಫ್ ನಗರ ಮಾರ್ಗದಲ್ಲಿ ಓಡಿಸುತ್ತಿರುವುದಕ್ಕೆ ಸಾರ್ವಜನಿಕರಿಂದ ಪ್ರೋತ್ಸಾಹ ಸಿಗದೇ ಇರುವುದರಿಂದ ಹೆಚ್ಚಿಗೆ ವಾಹನಗಳನ್ನು ಓಡಿಸುವ ಅಗತ್ಯವಿಲ್ಲ.

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರಿಗೆ ಸೌಲಭ್ಯವನ್ನು ಹೆಚ್ಚಿಸುವ ಅಭಿಪ್ರಾಯ ಹೊಂದಿಲ್ಲ.

## Papers laid on the table

ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳ ಹೆಸರಿನ ಮುಂದಿರುವ ಕರ್ನಾಟಕ ಸರ್ಕಾರದ ೧೯೮೪-೮೫ನೇ ಸಾಲಿನ (ವಾಣಿಜ್ಯ) ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ ವರದಿಯನ್ನು ಭಾರತ ಸಂವಿಧಾನದ ೧೫೧(೨)ನೇ ಅನುಚ್ಛೇದದ ಮೇರೆಗೆ ಮಂಡಿಸುತ್ತೇನೆ.